ಛತ್ರ ಖಾಲಿ ಇದೆ
ಶ್ರೀ ಪಿ.ಕೆ.ವಿ. ಆಚಾರ್ಯ ಸಭಾ ಭವನ
ನಂ. ಸಿ.ಎ 19, ದಟ್ಟಗಳ್ಳಿ 3ನೇ ಹಂತ, ಕನಕದಾಸನಗರ, ಮೈಸೂರು
ನೂತನವಾಗಿ ನಿರ್ಮಿಸಿರುವ ಕಲ್ಯಾಣ ಮಂಟಪ
ಅತ್ಯುತ್ತಮ ಸೌಕರ್ಯವುಳ್ಳ ಕಲ್ಯಾಣ ಮಂಟಪ 1000 ಜನ ಕೂರುವ ಉತ್ತಮ ಸಭಾಂಗಣ, 600 ಜನ ಕೂರುವ ಡೈನಿಂಗ್ ಹಾಲ್, ರಿಸೆಪ್ಷನ್‌ಗಾಗಿ ದೊಡ್ಡದಾದ ವೇದಿಕೆ, ಸುಂದರವಾದ ಮದುವೆ ಮಂಟಪ ಮತ್ತು 12 ರೂಂಗಳನ್ನು ಒಳಗೊಂಡ ಕಲ್ಯಾಣ ಮಂಟಪ ದೊರೆಯುತ್ತದೆ.
ಜನವರಿ, ಫೆಬ್ರವರಿ, ಮಾರ್ಚ್, ಏಪ್ರಿಲ್
ತಿಂಗಳಿನಲ್ಲಿ ಕೆಲವೇ ದಿನಗಳು ಖಾಲಿ ಇವೆ
Ph: 0821- 2542099, M: 9880013585

ಆಂದೋಲನ
ದಿನಪತ್ರಿಕೆ
ಸಂಸ್ಥಾಪಕ ಸಂಪಾದಕ: ರಾಜಶೇಖರ ಕೋಟಿ

EAT THE BEST
SHREEDEVI SR PLANTAIN LEAF
RESTAURANT
Veg & Non-Veg
1979, Rajkamal Talkies Road, Mysore-1
Tel: 2428034/2420420
Andhra Food
North Indian
Tandoor
We Undertake Outdoor Catering

ಕೇಂದ್ರ ಸರ್ಕಾರದ ಯೋಜನೆಗಳನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲು ಎರಡೂ ಕಡೆ ಸಮಾನ ಮನಸ್ಕ ಪಕ್ಷಗಳು ಆಡಳಿತದಲ್ಲಿರಬೇಕೆಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಬೆಂಗಳೂರಿನಲ್ಲಿ ಬಿಜೆಪಿ ಕರ್ನಾಟಕ ನವ ನಿರ್ಮಾಣ ಪರಿವರ್ತನಾ ಯಾತ್ರೆಯಲ್ಲಿ ಹೇಳಿದರು.

ಕೇಂದ್ರ, ರಾಜ್ಯದಲ್ಲಿ ಸಮಾನ ಮನಸ್ಕ ಪಕ್ಷ ಅಗತ್ಯ

ಎಚ್‌ಸಿಎಂ ಕ್ಷೇತ್ರ ಬದಲಾವಣೆ ಮುನ್ಸೂಚನೆ

ಈಗಿನ ಅವಧಿ ಮುಗಿಯುವವರೆಗೂ ನಾನು ತಿ.ನರಸೀಪುರದ ಶಾಸಕ. ಬಳಿಕ ಪಕ್ಷ, ಕಾರ್ಯಕರ್ತರು ಇಚ್ಛಿಸಿದೆಡೆ ಸ್ಪರ್ಧಿಸುವೆ ಎಂದು ಸಚಿವ ಡಾ.ಎಚ್.ಸಿ.ಮಹದೇವಪ್ಪ ಮದ್ದೂರಿನಲ್ಲಿ ಹೇಳಿದ್ದಾರೆ.

ಗರಿಷ್ಠ: ೨೮° । ಕನಿಷ್ಠ: ೧೩°
ಬಿಸಿಲ ತಾಪ ಏರಿಕೆ, ಮಳೆ ಮೋಡಗಳು ದೂರ

ಸಂಪುಟ: ೪೭, ಸಂಚಿಕೆ: ೮, ರಾಷ್ಟ್ರೀಯ ಶಕ ೧೯೩೯ ಶಿಶಿರ: ಪುಷ್ಯ-ಮಾಘ ೧೮, ●ಸಪ್ತಮಿ – ಹಸ್ತಾ, ಸೋಮವಾರ, ಜ.೮, ೨೦೧೮, ದೂರವಾಣಿ: ೨೪೪೯೫೧೬೧, ೨೪೪೯೫೧೬೪, ೨೪೪೯೫೧೬೫, ಫ್ಯಾಕ್ಸ್: ೨೪೪೯೫೧೬೩, ಪುಟ : ೧೨, ರೂ. ೩

ಐಎಸ್‌ಐ ಇದ್ದರಷ್ಟೇ ಅಸಲಿ ಅಲ್ಲ!

ಮೈಸೂರಿನಲ್ಲಿ ರಸ್ತೆ ಬದಿ ನಕಲಿ ಐಎಸ್‌ಐ ಹೆಲ್ಮೆಟ್ ರಾಜಾರೋಷ ಮಾರಾಟ

ಕೆ.ಆರ್.ಠಾಣೆ ಪೊಲೀಸರ ದಾಳಿ; ಒಂದೇ ದಿನ ೧೨೦ ಹೆಲ್ಮೆಟ್‌ಗಳ ವಶ

ಮೈಸೂರು,ಜ.೭–ಒಂದೆಡೆ ಪೊಲೀಸರು ಐಎಸ್‌ಐ ಗುರುತಿರುವ, ಗುಣಮಟ್ಟದ ಹೆಲ್ಮೆಟ್‌ಗಳನ್ನೇ ಧರಿಸಬೇಕು ಎಂಬ ನಿಯಮ ಕಡ್ಡಾಯಗೊಳಿಸಿದ್ದರೆ, ಇದನ್ನೇ ಬಂಡವಾಳವಾಗಿಸಿಕೊಂಡ ಕೆಲ ಖದೀಮ ವ್ಯಾಪಾರಸ್ಥರು 'ನಕಲಿ ಐಎಸ್‌ಐ' ಗುರುತಿನ ಹೆಲ್ಮೆಟ್‌ಗಳನ್ನು ಮಾರುತ್ತಾ ಜನರನ್ನು ವಂಚಿಸುತ್ತಿದ್ದಾರೆ.

ಕಳಪೆ ಹೆಲ್ಮೆಟ್‌ಗಳ ಮೇಲೆ ಸ್ಕ್ರೀನ್ ಪ್ರಿಂಟಿಂಗ್‌ನಲ್ಲಿ ಐಎಸ್‌ಐ ಗುರುತು ಮುದ್ರಿಸಿ, ಜನರಿಗೆ ಅಸಲಿ ಐಎಸ್‌ಐ ಹೆಲ್ಮೆಟ್ ಎಂದೇ ನಂಬಿಸಿ ಮಾರಾಟ ಮಾಡುತ್ತಿರುವ ವ್ಯಾಪಾರಿಗಳ ಮೇಲೆ ಭಾನುವಾರ ಮುಗಿಬಿದ್ದ ಪೊಲೀಸರು ಒಂದೇ ದಿನದಲ್ಲಿ ೧೨೦ ಹೆಲ್ಮೆಟ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ರಿಂಗ್ ರಸ್ತೆ ಬಳಿಯೇ ಹೆಚ್ಚು ವ್ಯಾಪಾರ: ನಗರದೊಳಗಾದರೆ ಪೊಲೀಸರು ದಾಳಿ ನಡೆಸುತ್ತಾರೆ ಎಂಬ ಭೀತಿಯಲ್ಲಿ ನಕಲಿ ಹೆಲ್ಮೆಟ್ ವ್ಯಾಪಾರಿಗಳು ವರ್ತುಲ ರಸ್ತೆ ಸುತ್ತಮುತ್ತಲಿನ ಸ್ಥಳಕ್ಕೆ ಮಾರಾಟದ ಜಾಗ ಬದಲಿಸಿದ್ದಾರೆ. ಅಸಲಿ ಐಎಸ್‌ಐ ಹೆಲ್ಮೆಟ್‌ಗಳೆಂದೇ ನಂಬಿಸಿ ನಗರ ಸಮೀಪದ ಹಳ್ಳಿಗಳಿಂದ ಬರುವ ದ್ವಿಚಕ್ರ ವಾಹನ ಸವಾರರಿಗೆ ಮಾರುತ್ತಿದ್ದಾರೆ.

ಪೊಲೀಸರಿಗೆ ತೋರಿಸಿಯೇ ಮಾರುತ್ತಿದ್ದೇವೆ: ಗ್ರಾಹಕರು ಹೆಲ್ಮೆಟ್‌ಗಳ ಅಸಲಿತನದ ಬಗ್ಗೆ ಪ್ರಶ್ನಿಸಿದರೆ, ಪೊಲೀಸರಿಗೆ ತೋರಿಸಿದ ಬಳಿಕವೇ ಮಾರಾಟ ಮಾಡುತ್ತಿದ್ದೇವೆ ಎಂದು ಈ ರಸ್ತೆ ಬದಿ ಹೆಲ್ಮೆಟ್ ಮಾರಾಟಗಾರರು ಸುಳ್ಳಿನ ಕಂತೆ ಕಟ್ಟುತ್ತಿದ್ದಾರೆ.

ಬೆಳಿಗ್ಗೆ ಪೊಲೀಸ್ ಠಾಣೆಗೆ ತೆರಳಿ ಈ ಹೆಲ್ಮೆಟ್‌ಗಳನ್ನೆಲ್ಲಾ ತೋರಿಸಿ ಅವರು ಒಪ್ಪಿಗೆ ನೀಡಿದ ನಂತರವೇ ಮಾರುತ್ತಿದ್ದೇವೆ ಎಂದು ಸುಳ್ಳು ಹೇಳುವ ಮೂಲಕ ಜನರನ್ನು ವಂಚಿಸುತ್ತಿದ್ದಾರೆ.

ದ್ವಿಚಕ್ರ ವಾಹನ ಸವಾರರು ತಲೆಯ ಸುರಕ್ಷತೆ ಮತ್ತು ಜೀವ ರಕ್ಷಣೆಗಾಗಿ ಐಎಸ್‌ಐ ಗುರುತು ಇರುವ ಉತ್ತಮ ಗುಣಮಟ್ಟದ ಹೆಲ್ಮೆಟ್‌ಗಳನ್ನೇ ಧರಿಸಬೇಕು ಎಂಬ ನಿಯಮವೇ ಇದೆ. ಈ ನಿಯಮವನ್ನು ನಗರದ ಸಂಚಾರ ಪೊಲೀಸರು ಕಟ್ಟುನಿಟ್ಟಾಗಿ ಜಾರಿಗೆ ತಂದು ವಾಹನ ಸವಾರರ ಜೀವದ ಬಗ್ಗೆ ಕಾಳಜಿ ತೋರುತ್ತಿದ್ದಾರೆ.

ಇದೇ ನಿಟ್ಟಿನಲ್ಲಿ ಪೊಲೀಸ್ ಆಯುಕ್ತ ಡಾ.ಎ.ಸುಬ್ರಹ್ಮಣ್ಯೇಶ್ವರರಾವ್ ಅವರ ಮಾರ್ಗದರ್ಶನದಲ್ಲಿ ಪೊಲೀಸರು ನಗರದ ವಿವಿಧೆಡೆ ಕಳೆದ ವಾರ ಆಪರೇಷನ್ ಸೇಫ್ ಡ್ರೈವ್ ಹೆಸರಿನಲ್ಲಿ ಕಾರ್ಯಾಚರಣೆ ನಡೆಸಿ ೧೫ ಸಾವಿರಕ್ಕೂ ಹೆಚ್ಚು ಕಳಪೆ ಹೆಲ್ಮೆಟ್‌ಗಳನ್ನು ವಶಪಡಿಸಿಕೊಂಡಿದ್ದರು. ಅಲ್ಲದೇ, ಗುಣಮಟ್ಟದ ಹಾಗೂ ಐಎಸ್‌ಐ ಮಾರ್ಕ್ ಇರುವ ಹೆಲ್ಮೆಟ್ ಖರೀದಿಗಾಗಿ ಒಂದು ವಾರದ ಗಡುವನ್ನೂ ನೀಡಿದರು. ಪೊಲೀಸರ ಈ ಕಾರ್ಯಾಚರಣೆ ಕೆಲ ವಂಚಕ ವ್ಯಾಪಾರಿಗಳಿಗೆ ಸಂತಸ ತಂದಿತು. ಅವರೆಲ್ಲಾ ಕಳಪೆ ಹೆಲ್ಮೆಟ್‌ಗಳ ಮೇಲೆ ಐಎಸ್‌ಐ ಗುರುತನ್ನೇ ನಕಲಿ ಮಾಡುವ ದಂಧೆಗಿಳಿದುಬಿಟ್ಟರು.

⏭ ೧೧

ಕಳಪೆ ಹೆಲ್ಮೆಟ್ ಮೇಲೆ ಮುದ್ರಿಸಿರುವ ನಕಲಿ ಐಎಸ್‌ಐ ಗುರುತನ್ನು ಅಳಿಸಿ ತೋರಿಸುತ್ತಿರುವ ಕೆಆರ್ ಠಾಣೆ ಇನ್‌ಸ್ಪೆಕ್ಟರ್ ಮಂಜುನಾಥ್.

ಇದು ಅಸಲಿ ಐಎಸ್‌ಐ ಗುರುತು ಇರುವ ಹೆಲ್ಮೆಟ್ ಎಂದು ತೋರಿಸುತ್ತಿರುವ ಕೆಆರ್ ಠಾಣೆ ಪೊಲೀಸ್ ಪೇದೆ.

- ಮೈಸೂರು ಜಿಲ್ಲಾದ್ಯಂತ ನಕಲಿ ಐಎಸ್‌ಐ ಮಾರ್ಕ್ ಹೆಲ್ಮೆಟ್ ಮಾರಾಟ ಜಾಲ
- ದೇವರಾಜ ಮೊಹಲ್ಲಾದಲ್ಲಿ ಉತ್ತರ ಭಾರತದ ವ್ಯಾಪಾರಿ ಗೋದಾಮು ಇರುವ ಶಂಕೆ

೫೦–೬೦ ಸಾವಿರ ರೂ. ಬೆಲೆಯ ಬೈಕ್ ಮಾರುವ ಕಂಪನಿಯು ಐಎಸ್‌ಐ ಗುಣಮಟ್ಟದ ಹೆಲ್ಮೆಟ್ಟನ್ನೂ ಗ್ರಾಹಕನಿಗೆ ಮಾರುವಾಗಲೇ ಕೊಡಬೇಕು. ಇದು ಕಡ್ಡಾಯವಾಗಬೇಕು.

-ಜಿ.ಬಿ.ರಂಗಸ್ವಾಮಿ, ನಿವೃತ್ತ ಡಿವೈಎಸ್‌ಪಿ

ಅಸಲಿ–ನಕಲಿ ಗುರುತಿಸುವುದು ಹೇಗೆ?

ಐಎಸ್‌ಐ ಮಾರ್ಕ್ ಇರುವ ಅಸಲಿ ಹೆಲ್ಮೆಟ್‌ಗೂ, ನಕಲಿ ಗುರುತಿನ ಹೆಲ್ಮೆಟ್‌ಗೂ ಬಹಳ ವ್ಯತ್ಯಾಸವಿದೆ.

ಐಎಸ್‌ಐ ಪ್ರಮಾಣೀಕೃತ ಹೆಲ್ಮೆಟ್‌ಗಳ ಮೇಲೆ ಅವುಗಳ ತಯಾರಿಕೆ ವೇಳೆಯೇ ಈ ಗುಣಮಟ್ಟ ಪ್ರಮಾಣೀಕರಣ ಗುರುತನ್ನು ಸುಲಭಕ್ಕೆ ಅಳಿಸಲಾಗದಂತೆ ಹೀಟ್ ಟ್ರೀಟ್‌ಮೆಂಟ್ ಮೂಲಕ ಮುದ್ರಿಸಲಾಗುತ್ತದೆ. ಹಾಗಾಗಿ ಅದನ್ನು ಅಳಿಸಿ ಹಾಕುವುದು ಸಾಧ್ಯವಾಗದ ಮಾತು.

ಕಳಪೆ ಹೆಲ್ಮೆಟ್‌ಗಳ ಮೇಲೆ ಸ್ಕ್ರೀನ್ ಪ್ರಿಂಟಿಂಗ್ ಮೂಲಕ ಐಎಸ್‌ಐ ಅಕ್ಷರಗಳನ್ನು ಮುದ್ರಿಸಲಾಗಿರುತ್ತದೆ. ಹೆಲ್ಮೆಟ್‌ಗಳ ಹಿಂಬದಿಯಲ್ಲಿ ಬಿಳಿ ಸೇರಿದಂತೆ ವಿವಿಧ ಬಣ್ಣ ಬಳಸಿ ನಕಲಿ ಕೋಡ್ ಸಮೇತ ಮುದ್ರಿಸಲಾಗಿರುವ ಈ ಐಎಸ್‌ಐ ಮಾರ್ಕ್‌ಗಳನ್ನು ಬ್ಲೇಡ್ ಸೇರಿದಂತೆ ಯಾವುದೇ ಚೂಪು ವಸ್ತುವಿನಿಂದ ಕೆರೆದರೆ ಕ್ಷಣ ಮಾತ್ರದಲ್ಲಿ ಬಣ್ಣ ಅಳಿಸಿ ಹೋಗುತ್ತದೆ.

ವೀರಶೈವ ಮಹಾಸಭಾ ಹೆಸರು ಬದಲಿಲ್ಲ

ಬೆಂಗಳೂರಿನಲ್ಲಿ ವಿಶೇಷ ಸರ್ವ ಸದಸ್ಯರ ಸಭೆ ನಿರ್ಧಾರ

ಬೆಂಗಳೂರಿನ ಆರ್.ಟಿ.ನಗರದಲ್ಲಿನ ತರಳಬಾಳು ಸಭಾಂಗಣದಲ್ಲಿ ಭಾನುವಾರ ನಡೆದ ಅಖಿಲ ಭಾರತ ವೀರಶೈವ ಮಹಾಸಭಾದ ಸರ್ವ ಸದಸ್ಯರ ವಿಶೇಷ ಸಭೆಯಲ್ಲಿ ಮಹಾಸಭಾ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ, ಎಂ.ವಿ.ರಾಜಶೇಖರನ್, ಭೀಮಣ್ಣ ಖಂಡ್ರೆ, ಸಚಿವ ಈಶ್ವರ ಖಂಡ್ರೆ, ಕಾರ್ಯದರ್ಶಿ ಸಚ್ಚಿದಾನಂದಮೂರ್ತಿ ಮತ್ತಿತರರು ಭಾಗವಹಿಸಿದ್ದರು.

ಬೆಂಗಳೂರು,ಜ.೭– 'ಅಖಿಲ ಭಾರತ ವೀರಶೈವ ಮಹಾಸಭಾ' ಹೆಸರನ್ನೇ ಯಥಾವತ್ತಾಗಿ ಉಳಿಸಿಕೊಳ್ಳಲು ನಗರದಲ್ಲಿ ಭಾನುವಾರ ನಡೆದ ಮಹಾಸಭೆಯ ವಿಶೇಷ ಸರ್ವ ಸದಸ್ಯರ ಸಭೆ ತೀರ್ಮಾನಿಸಿದೆ.

ಅಖಿಲ ಭಾರತ ವೀರಶೈವ ಮಹಾಸಭಾ ಹೆಸರಿಗೆ ಲಿಂಗಾಯತ ಪದ ಸೇರ್ಪಡೆ ಮಾಡಬೇಕೆಂದು ಹಲ ದಶಕಗಳಿಂದ ಹೋರಾಟ ನಡೆದುಕೊಂಡು ಬಂದಿದೆ. ಹೀಗಾಗಿ ಆಗಾಗ ಬದಲಾದ ಸನ್ನಿವೇಶದಲ್ಲಿ ಸಂಘಟನೆಯ ಹೆಸರನ್ನು ಬದಲಾವಣೆ ಮಾಡಲಾಗಿತ್ತಾದರೂ, ಅಧಿಕೃತವಾಗಿ 'ಬೈಲಾ'ದಲ್ಲಿ ಹೆಸರು ಬದಲಿಸಿರಲಿಲ್ಲ. ಹೀಗೆ ಆಗಾಗ್ಗೆ ನಡೆದ ಕಿತ್ತಾಟ, ಒತ್ತಾಯಗಳಿಂದಾಗಿ 'ವೀರಶೈವ–ಲಿಂಗಾಯತ' ಎಂದು ಹೆಸರನ್ನು ಬದಲಿಸಲಾಗಿತ್ತು. ಆದರೆ, ಅದು ನಿಯಮಬದ್ಧವಾಗಿರಲಿಲ್ಲ.

ಸರ್ವ ಸದಸ್ಯರ ಸಭೆ ನಿರ್ಧಾರ

ಹಾನಗಲ್ಲ ಕುಮಾರ ಸ್ವಾಮಿ ಅವರು ಇಟ್ಟ 'ಅಖಿಲ ಭಾರತ ವೀರಶೈವ ಮಹಾಸಭಾ' ಹೆಸರನ್ನು ಹಾಗೆಯೇ ಉಳಿಸಿಕೊಳ್ಳಬೇಕು. ೧೧೩ ವರ್ಷಗಳಿಂದ ಇರುವ ಹೆಸರನ್ನು ಯಾವುದೇ ಕಾರಣಕ್ಕೂ ಬದಲಿಸಬಾರದು.

⏭ ೧೧

ಮಂಗಳೂರು: ಹಲ್ಲೆ ಗಾಯಾಳು ಬಶೀರ್ ನಿಧನ

ಹಲವು ಶಸ್ತ್ರಚಿಕಿತ್ಸೆಗೂ ಸ್ಪಂದಿಸದ ಗಾಯಾಳು; ಫಲಿಸದ ಸರ್ವ ಧರ್ಮೀಯರ ಪ್ರಾರ್ಥನೆ

ಮಂಗಳೂರು,ಜ.೭– ನಗರದ ಕೊಟ್ಟಾರ ಚೌಕಿ ಬಳಿ ಬುಧವಾರ ರಾತ್ರಿ ನಡೆದ ಹಲ್ಲೆಯಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಆಕಾಶ ಭವನ ಬಡಾವಣೆ ನಿವಾಸಿ, ಫಾಸ್ಟ್ ಫುಡ್ ಮಾಲೀಕ ಅಹಮ್ಮದ್ ಬಶೀರ್(೪೮) ಇಲ್ಲಿನ ಎ.ಜೆ.ಆಸ್ಪತ್ರೆಯಲ್ಲಿ ಭಾನುವಾರ ಬೆಳಿಗ್ಗೆ ೮.೦೫ಕ್ಕೆ ಕೊನೆಯುಸಿರೆಳೆದರು.

ಬಶೀರ್

ಸಂಜೆ ಕುಳೂರಿನ ಮೊಯಿದ್ದೀನ್ ಜುಮ್ಮಾ ಮಸೀದಿಯಲ್ಲಿ ಅಂತಿಮ ವಿಧಿ ವಿಧಾನ ಬಳಿಕ ಅಂತ್ಯಕ್ರಿಯೆ ನಡೆಸಲಾಯಿತು.

ಕಾಟಿಪಳ್ಳದಲ್ಲಿ ದೀಪಕ್ ರಾವ್ ಕೊಲೆ ಬಳಿಕ ಪ್ರತೀಕಾರವಾಗಿ ನಾಲ್ವರು ಯುವಕರು ಬುಧವಾರ ರಾತ್ರಿ ತಲವಾರುಗಳಿಂದ ನಡೆಸಿದ ಹಲ್ಲೆಯಲ್ಲಿ ಬಶೀರ್ ತೀವ್ರವಾಗಿ ಗಾಯಗೊಂಡಿದ್ದರು. ಅವರಿಗೆ ೪ ದಿನಗಳಲ್ಲಿ ಹಲವು ಶಸ್ತ್ರಚಿಕಿತ್ಸೆ ನಡೆಸಲಾಗಿತ್ತು, ಹತ್ತಕ್ಕೂ ಹೆಚ್ಚು ಬಾಟಲಿ ರಕ್ತ ನೀಡಲಾಗಿತ್ತು.

೧೦ ಲಕ್ಷ ರೂ. ಪರಿಹಾರ: ಬಶೀರ್ ಕುಟುಂಬಕ್ಕೆ ಜಿಲ್ಲಾಡಳಿತದಿಂದ ೫ ಲಕ್ಷ ರೂ. ಮತ್ತು ಸಿಎಂ ಪರಿಹಾರ ನಿಧಿಯಿಂದ ೫ ಲಕ್ಷ ರೂ. ಪರಿಹಾರ ಘೋಷಿಸಲಾಗಿದೆ.

ಎ.ಜೆ.ಆಸ್ಪತ್ರೆಗೆ ಸಚಿವ ಯು.ಟಿ.ಖಾದರ್, ಶಾಸಕ ಮೊಯಿದ್ದೀನ್ ಬಾವಾ, ಮಾಜಿ ಸಚಿವ ಕೃಷ್ಣ ಪಾಲೇಮಾರ್ ಭೇಟಿ ನೀಡಿದ್ದರು.

ಆಸ್ಪತ್ರೆ ಆವರಣದಲ್ಲಿದ್ದ ಜನರು ಪಾಲೇಮಾರ್ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಹಣ ಕೊಟ್ಟು ಅಮಾಯಕರನ್ನು ಕೊಲ್ಲಿಸುವುದು. ಈಗ ಶಾಂತಿಯ ಹೆಸರಿನಲ್ಲಿ ರಾಜಕಾರಣ ಮಾಡಲು ಬರುತ್ತೀರಾ? ಎಂದು ಮಾಜಿ ಸಚಿವರನ್ನು ತರಾಟೆಗೆ ತೆಗೆದುಕೊಂಡರು.

ದಯವಿಟ್ಟು ಶಾಂತಿ ಕಾಪಾಡಿ: ಈ ಸಂದರ್ಭ ಮಧ್ಯೆ ಪ್ರವೇಶಿಸಿದ ಬಶೀರ್ ಅವರ ಸೋದರ ಹಕೀಂ, 'ಅಲ್ಲಾಹು, ಪೈಗಂಬರ್ ಅವರ ಹೆಸರು ಹೇಳಿ ಬೇಡಿಕೊಳ್ಳುವೆ. ಎಲ್ಲರೂ ಶಾಂತಿ ಕಾಪಾಡಿ. ಅಣ್ಣನ ಆತ್ಮಕ್ಕೆ ಶಾಂತಿ ಸಿಗುವಂತೆ ವರ್ತಿಸಿ' ಎಂದು ಮನವಿ ಮಾಡಿದರು. ಇದೇ ವೇಳೆ, ನಗರದ ನೂರಾರು ಸಂಘಟನೆಗಳ ಮುಖಂಡರು ಸಹ ಶಾಂತಿ ಕಾಪಾಡುವಂತೆ ಜನರಲ್ಲಿ ಮನವಿ ಮಾಡಿದ್ದಾರೆ.

⏭ ೧೦

ಮನುಷ್ಯತ್ವ ಇಲ್ಲದವರಿಂದ ಹತ್ಯೆ: ಸಿಎಂ

ಮಂಗಳೂರು: ಮನುಷ್ಯತ್ವ ಇಲ್ಲದವರಿಂದ ಹತ್ಯೆಗಳು ನಡೆಯುತ್ತಿವೆ. ಬುದ್ಧಿವಂತರ ಜಿಲ್ಲೆ ಎಂದು ಹೇಳಲಾಗುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲವರು ಹೆಣದ ಮೇಲೆ ರಾಜಕೀಯ ಮಾಡುತ್ತಿದ್ದಾರೆ. ಇದನ್ನು ಕೈಬಿಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಜಿಲ್ಲೆಯಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳ ಉದ್ಘಾಟನೆ, ಶಿಲಾನ್ಯಾಸ ನೆರವೇರಿಸಲು ಬೆಳ್ತಂಗಡಿಗೆ ಆಗಮಿಸಿದ್ದ ಅವರು ಸುದ್ದಿಗಾರರ ಜತೆ ಮಾತನಾಡಿದರು.

ಕೋಮುವಾದಿಗಳಿಂದ ಬಶೀರ್ ಹತ್ಯೆ ನಡೆದಿದೆ. ಕರಾವಳಿಯಲ್ಲಿ ಇಂಥ ಘಟನೆ ಮರುಕಳಿಸುತ್ತಿರುವುದು ಬೇಸರ ತರಿಸಿದೆ. ಸಾಮರಸ್ಯ ಮೂಡಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು. ಸಂತ್ರಸ್ತರ ಕುಟುಂಬಕ್ಕೆ ಸೂಕ್ತ ಪರಿಹಾರ ಒದಗಿಸಲಾಗುವುದು ಎಂದರು. ಬೆಳ್ತಂಗಡಿಯಲ್ಲಿ ಮುಖ್ಯಮಂತ್ರಿಗಳು ಭಾಗವಹಿಸಿದ್ದ ಸಭೆಯಲ್ಲಿ ದೀಪಕ್ ರಾವ್ ಮತ್ತು ಬಶೀರ್ ಸಾವಿಗೆ ಶೋಕ ವ್ಯಕ್ತಪಡಿಸಿ ಮೌನಾಚರಣೆ ಮಾಡಲಾಯಿತು.

ಸಿಎಂ ಮೌನಾಚರಣೆ

ತ್ಯಾಜ್ಯ ಗುಂಡಿ ದುರಂತ: ಮೂವರ ದಾರುಣ ಸಾವು

ಬೆಂಗಳೂರು ಸೋಮಸಂದ್ರ ಪಾಳ್ಯ ವಸತಿ ಸಮುಚ್ಚಯದಲ್ಲಿ ದುರ್ಘಟನೆ

ಬೆಂಗಳೂರು,ಜ.೭– ನಗರದಲ್ಲಿ ವಸತಿ ಸಂಕೀರ್ಣವೊಂದರಲ್ಲಿ ಭಾನುವಾರ ಸಂಭವಿಸಿದ ತ್ಯಾಜ್ಯ ಗುಂಡಿ ದುರಂತದಲ್ಲಿ ಮೂವರು ಜೀವ ಕಳೆದುಕೊಂಡಿದ್ದಾರೆ.

ಸೋಮಸಂದ್ರ ಪಾಳ್ಯದ ಎನ್‌ಡಿ ಸಫಲ್ ಅಪಾರ್ಟ್‌ಮೆಂಟ್(ವಸತಿ ಸಂಕೀರ್ಣ)ನಲ್ಲಿನ ತ್ಯಾಜ್ಯ ನೀರು ಸಂಸ್ಕರಣಾ ಘಟಕದಲ್ಲಿ ಸ್ವಚ್ಛತಾ ಕೆಲಸಕ್ಕೆಂದು ಆಳವಾದ ತೊಟ್ಟಿಗೆ ಇಳಿದಿದ್ದ ಇಬ್ಬರು ಕಾರ್ಮಿಕರು, ಅವರನ್ನು ರಕ್ಷಿಸಲು ಯತ್ನಿಸಿದ ಗುತ್ತಿಗೆದಾರ ಉಸಿರುಗಟ್ಟಿ ದಾರುಣವಾಗಿ ಸಾವನ್ನಪ್ಪಿದ್ದಾರೆ.

ಮೃತರನ್ನು ನಾರಾಯಣಸ್ವಾಮಿ, ಶ್ರೀನಿವಾಸ್, ಮಹದೇವಯ್ಯ ಎಂದು ಗುರುತಿಸಲಾಗಿದೆ.

ಅನನುಭವಿಗಳು: ಗುತ್ತಿಗೆದಾರ ನಾರಾಯಣಸ್ವಾಮಿ, ಸೆಪ್ಟಿಕ್ ಟ್ಯಾಂಕ್ ಸ್ವಚ್ಛಗೊಳಿಸುವ ಸಲುವಾಗಿ ಕರೆತಂದಿದ್ದ ಇಬ್ಬರಿಗೂ ಈ ಕೆಲಸದಲ್ಲಿ ಅನುಭವ ಇರಲಿಲ್ಲ ಎನ್ನಲಾಗಿದೆ. ಮೃತ ಶ್ರೀನಿವಾಸ್ ಪೇಂಟರ್ ಆಗಿದ್ದರೆ, ಮಹದೇವಯ್ಯ ಎಲೆಕ್ಟ್ರಿಷಿಯನ್ ವೃತ್ತಿಯವರು ಎಂದು ತಿಳಿದುಬಂದಿದೆ.

ವಸತಿ ಸಂಕೀರ್ಣದಲ್ಲಿನ ೧೦ ಅಡಿ ಆಳದ ಎಸ್‌ಟಿಪಿ ಸ್ವಚ್ಛಗೊಳಿಸಲು ಮೊದಲು ಶ್ರೀನಿವಾಸ್ ಇಳಿದಿದ್ದಾರೆ. ಇದೇ ವೇಳೆ ಮಹದೇವಯ್ಯ ಕಾಲು ಜಾರಿ ಒಳಕ್ಕೆ ಬಿದ್ದಿದ್ದಾರೆ. ಇಬ್ಬರೂ ಹೊರಬರಲಾಗದೇ ಪರದಾಡುತ್ತಿದ್ದನ್ನು ಕಂಡು ಗುತ್ತಿಗೆದಾರ ನಾರಾಯಣಸ್ವಾಮಿಯೂ ಒಳಕ್ಕೆ ಇಳಿದಿದ್ದಾರೆ.

⏭ ೧೧

ವಸತಿ ಸಂಕೀರ್ಣದಲ್ಲಿ ತ್ಯಾಜ್ಯ ಗುಂಡಿ ಇದ್ದ ಸ್ಥಳ.

ಇಂದು ಮೈಸೂರಿನಲ್ಲಿ ಎಚ್‌ಡಿಕೆ ಸಂವಾದ

ಕಲಾಮಂದಿರ: ಶಿಕ್ಷಣ ಸೇರಿದಂತೆ ವಿವಿಧ ಕ್ಷೇತ್ರಗಳ ತಜ್ಞರು ಭಾಗಿ

ಮೈಸೂರು,ಜ.೭– ಜಾ.ದಳ ರಾಜ್ಯಾಧ್ಯಕ್ಷ, ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರು ಜ.೮ರ ಬೆಳಿಗ್ಗೆ ೧೧ ಗಂಟೆಗೆ ನಗರದ ಕಲಾಮಂದಿರದಲ್ಲಿ ಶಿಕ್ಷಣ ಸೇರಿದಂತೆ ವಿವಿಧ ಕ್ಷೇತ್ರಗಳ ತಜ್ಞರೊಂದಿಗೆ ಸಂವಾದ ನಡೆಸಲಿದ್ದಾರೆ. ಮೈಸೂರಿನಲ್ಲಿ ನೆಲೆಸಿರುವ ವಿವಿಧ ಕ್ಷೇತ್ರಗಳ ತಜ್ಞರಿಂದ ಸಲಹೆ ಸೂಚನೆ ಪಡೆಯುವುದು ಸಂವಾದದ ಉದ್ದೇಶ. ಕೃಷಿ, ಕೈಗಾರಿಕೆ, ಶಿಕ್ಷಣ, ಇಂಜಿನಿಯರಿಂಗ್, ವೈದ್ಯಕೀಯ ಸೇರಿದಂತೆ ಪ್ರಮುಖ ಕ್ಷೇತ್ರಗಳಲ್ಲಿ ಆಧುನಿಕ ತಂತ್ರಜ್ಞಾನ ಅಳವಡಿಕೆ ಕುರಿತು ಸಂವಾದ ನಡೆಯಲಿದೆ.

ಈಗಾಗಲೇ ರಾಜ್ಯದ ವಿವಿಧೆಡೆ ಅಲ್ಪಸಂಖ್ಯಾತರು, ದಲಿತರು, ಹಿರಿಯ ನಾಗರಿಕರ ಜತೆ ಸಂವಾದ ನಡೆಸಿರುವ ಎಚ್‌ಡಿಕೆ ಅವರು, ಈ ಮೈಸೂರಿನಲ್ಲಿ ಶೈಕ್ಷಣಿಕ ಕ್ಷೇತ್ರದ ತಜ್ಞರ ಜತೆ ಸಮಾಲೋಚನೆ, ಸಂವಾದ ನಡೆಸಲು ಉತ್ಸುಕತೆ ತೋರಿದ್ದಾರೆ.

⏭ ೧೧

ಕೊಲೆಗೂ ಮುನ್ನವೇ ನಾಲ್ವರ ಸೆರೆ!

ಮತ್ತೊಂದು ಲೂಟಿ ಪ್ರಕರಣ: ಇನ್ನೂ ನಾಲ್ವರ ಬಂಧನ: ೮೦ ಸಾವಿರ ರೂ. ಚಿನ್ನಾಭರಣ ವಶ

ಮಂಡ್ಯ,ಜ.೭–ಜಿಲ್ಲೆಯ ಶ್ರೀರಂಗಪಟ್ಟಣ ಪೊಲೀಸರು, ವ್ಯಕ್ತಿ ಹತ್ಯೆಗೆ ಸಂಚು ಹೂಡಿದ್ದ ನಾಲ್ವರು ದುರುಳರನ್ನು ಕೊಲೆ ನಡೆಯುವುದಕ್ಕೂ ಮುನ್ನವೇ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ಗ್ರಾಮಾಂತರ ಠಾಣೆ ಪೊಲೀಸರು ನಾಲ್ವರು ಆರೋಪಿಗಳನ್ನು ಬಂಧಿಸಿ, ಚಿನ್ನಾಭರಣ, ನಗದು, ಬೈಕ್, ಮೊಬೈಲ್ ಸೇರಿದಂತೆ ಒಟ್ಟು ೮೦,೦೦೦ ರೂ. ಬೆಲೆಯ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ದರೋಡೆ–ಕೊಲೆಗೆ ಸಂಚು: ಶ್ರೀರಂಗಪಟ್ಟಣ ತಾಲ್ಲೂಕಿನ ಮಂಡ್ಯ ಕೊಪ್ಪಲು ಕಾವೇರಿ ಬೋರೇದೇವರ ದೇವಸ್ಥಾನ ಬಳಿ ಕೊಲೆಗೆ ಸಂಚು ರೂಪಿಸಿದ್ದ ಬೆಂಗಳೂರಿನ ತಲೆ ಮಂಜ, ಉಪ್ಪಿ, ಗರಡಿ ಹೇಮಂತ, ಕೆಂಚನನ್ನು ಅರಕೆರೆ ಪೊಲೀಸರು ಭಾನುವಾರ ಬಂಧಿಸಿದರು.

⏭ ೧೧

ಬಂಧಿತ ಲೂಟಿಕೋರ, ವಶಪಡಿಸಿಕೊಂಡ ವಸ್ತುಗಳ ಜತೆ ಮಂಡ್ಯ ಗ್ರಾಮಾಂತರ ಪೊಲೀಸರು.

ಭಾರತ-ದ.ಆಫ್ರಿಕಾ: ಮೂರನೇ ದಿನ ಮಳೆಯದ್ದೇ ಆಟ

⏭ ವರದಿ ಪುಟ ೩

ಮೈಸೂರು NECC
ಕೋಳಿ ಮೊಟ್ಟೆ ಧಾರಣೆ
100ಕ್ಕೆ Rs. 400
ದೂರವಾಣಿ: 2425156

Monday 8 January 2018
ಆಂದೋಲನ
ಅಂತರ ಜಾಲ ವಿಳಾಸ
andolana.epapertoday.com
ಸುದ್ದಿಗಾಗಿ
andolana@gmail.com

ನೇತಾಜಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಮೈಸೂರು.
FDA ಹಾಗೂ SDA
ಪತ್ರಿಕೆ – 2 (ಕನ್ನಡ),
ಪರೀಕ್ಷೆಗೆ ತರಗತಿಗಳು ದಿನಾಂಕ 8–01–2018
ಸೋಮವಾರದಿಂದ ತರಬೇತಿಯು ಪ್ರಾರಂಭವಾಗಲಿದೆ.
9980639953 / 7899181909